03 ತಿಂಗಳ ಅವಧಿಗೆ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿ ಮೆ॥ ಈಗಲ್ ಎನ್‌ಫೋರ್ಸ್‌ಮೆಂಟ್ ಸಲ್ಯೂಷನ್ಸ್ ಸಂಸ್ಥೆಗೆ ದಿ: 28–01–2014 ರಲ್ಲಿ ಹಾಗೂ ಮಹದೇವಪುರ ವಲಯಕ್ಕೆ ಮೆ॥ ಟ್ರೇಡ್‌ಲಿಂಕ್ ಸಂಸ್ಥೆಗೆ, ಬೊಮ್ಮನಹಳ್ಳಿ ವಲಯಕ್ಕೆ ಮೆ॥ ಎಂ.ಎಂ.ಸ್ಟೀಲ್ ಸಂಸ್ಥೆಗೆ, ಯಲಹಂಕ ವಲಯಕ್ಕೆ ಸನ್‌ರೈಸ್ ಎಂಟರ್‌ಪ್ರೈಸಸ್‌ರವರಿಗೆ, ದಾಸರಹಳ್ಳಿ ವಲಯಕ್ಕೆ ಮೆ॥ ಸೈಟ್ ಎಫೆಕ್ಟ್ ಸಂಸ್ಥೆಗೆ, ರಾಜರಾಜೇಶ್ವರಿ ನಗರ ವಲಯಕ್ಕೆ ಮೆ॥ ಎಂ.ಟಿ. ಸ್ಟೀಲ್ಸ್ ಸಂಸ್ಥೆಗೆ, ಕಾರ್ಯಾದೇಶವನ್ನು ನೀಡಲಾಗಿದೆ.

03 ತಿಂಗಳ ಅವಧಿಯ ನಂತರ ತೆರವು ಕಾರ್ಯಾಚರಣೆ ನಡೆಸಲು ಟೆಂಡರ್ ಆಹ್ವಾನಿಸಿ ಹೊರಗುತ್ತಿಗೆ ನೀಡಲು ಕ್ರಮವಹಿಸಲಾಗುತ್ತಿದೆ.

ಲೋಕಾಯುಕ್ತ–ದಾಳಿ

1275(1407); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ದಿನಾಂಕ 26–12–2011ರಂದು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ ಐ.ಎ.ಎಸ್., ಅಧಿಕಾರಿಗಳ ಸಂಖ್ಯೆಯೆಷ್ಟು; ಅಧಿಕಾರಿಗಳ ಹೆಸರು; ಮತ್ತು ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳ ಮತ್ತು ಪದನಾಮದ ವಿವರ ನೀಡುವುದು;

ಆ) ದಾಳಿಯ ಸಮಯದಲ್ಲಿ ಪತ್ತೆಯಾಗಿರುವ ಆಸ್ತಿ, ನಗದು ಮತ್ತು ಇತರೆ ವಸ್ತುಗಳಾವುವು(ವಿವರ ನೀಡುವುದು);

ಇ) ದಾಳಿ ನಡೆದ ನಂತರ ಎಷ್ಟು ದಿನಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಈ ಬಗ್ಗೆ ಅಂತಿಮ ತನಿಖಾ ವರದಿಯನ್ನು ಸಂಬಂಧಪಟ್ಟವರಿಗೆ ಸಲ್ಲಿಸಿದ್ದಾರೆ(ವಿವರ ನೀಡುವುದು); ಇದರ ಮೇಲೆ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮಗಳೇನು;

ಈ) ಒಂದು ವೇಳೆ ದಾಳಿ ನಡೆದು ಎರಡು ವರ್ಷಗಳು ಕಳೆದಿದ್ದರೂ ಇಲ್ಲಿಯವರೆವಿಗೂ ಲೋಕಾಯುಕ್ತ ಅಧಿಕಾರಿಗಳು ಈ ಪ್ರಕರಣದ ಬಗ್ಗೆ ತನಿಖಾ ವರದಿಯನ್ನು ಸಲ್ಲಿಸದೇ ಇರಲು ಕಾರಣಗಳೇನು;

ಉ) ಈ ವಿಷಯದಲ್ಲಿ ಈಗಾಗಲೇ ವಿಳಂಬವಾಗಿರುವುದರಿಂದ ಆದಷ್ಟು ಶೀಘ್ರವಾಗಿ ಸರ್ಕಾರ ಲೋಕಾಯುಕ್ತ ಅಧಿಕಾರಿಗಳಿಂದ ತನಿಖಾ ವರದಿಯನ್ನು ತರಿಸಿಕೊಂಡು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು)

ಅ) ಐ.ಎ.ಎಸ್., ಅಧಿಕಾರಿಗಳ ಸಂಖ್ಯೆ – 03.

ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಪ್ರಕರಣಗಳು ತನಿಖಾ ಹಂತದಲ್ಲಿರುವುದರಿಂದ ಅಂತಿಮ ವರದಿ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿರುವುದಿಲ್ಲ.

ಈ) ಮಾಹಿತಿ ಸಂಗ್ರಹಣೆ, ಅನುಬಂಧಗಳಲ್ಲಿ ಆರೋಪಿತರಿಂದ ಮಾಹಿತಿ ಸಂಗ್ರಹಣೆ, ವಿವಿಧ ಇಲಾಖೆಗಳೊಂದಿಗೆ ಪತ್ರ ವ್ಯವಹಾರಗಳ ಕಾರಣಗಳಿಂದಾಗಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಅಂತಿಮ ತನಿಖಾ ವರದಿಯನ್ನು ಸಲ್ಲಿಸಿರುವುದಿಲ್ಲ.

ಉ) ಅಂತಿಮ ತನಿಖಾ ವರದಿಗಳು ಕರ್ನಾಟಕ ಲೋಕಾಯುಕ್ತರಿಂದ ಸ್ವೀಕೃತವಾದ ತಕ್ಷಣ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ–1

1. ಶ್ರೀ ಮಹಮದ್ ಎ. ಸಾದಿಕ್, ಐ.ಎ.ಎಸ್ (ಪ್ರಸ್ತುತ ನಿವೃತ್ತ), ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.

2. ಶ್ರೀ ಎಂ.ವಿ. ವೀರಭದ್ರಯ್ಯ, ಐ.ಎ.ಎಸ್ (ಸ್ವಯಂ ನಿವೃತ್ತಿ), ಡೆಪ್ಯೂಟಿ ಜನರಲ್ ಮ್ಯಾನೇಜರ್, ಕೃಷ್ಣ ಮೇಲ್ದಂಡೆ ಯೋಜನೆ, ಆಲಮಟ್ಟಿ, ಬಾಗಲಕೋಟೆ ಜಿಲ್ಲೆ,

3. ಶ್ರೀ ಸಿದ್ದಯ್ಯ, ಐ.ಎ.ಎಸ್ (ಪ್ರಸ್ತುತ ನಿವೃತ್ತ), ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

ಅನುಬಂಧ–2

1. ಶ್ರೀ ಮಹಮದ್ ಎ. ಸಾದಿಕ್, ಐ.ಎ.ಎಸ್(ಪ್ರಸ್ತುತ ನಿವೃತ್ತ).

1. ₹ 54,76,300/– ಬೆಲೆ ಬಾಳುವ ನಿವೇಶನ ಮತ್ತು ಮನೆಗಳು
2. ₹ 13,10,548/– ಮೋಟಾರು ಕಾರು ಮತ್ತು ಬ್ಯಾಂಕ್ ಖಾತೆಗಳಲ್ಲಿನ ಬಾಕಿ ಮೊತ್ತ
3. 483.9 ಗ್ರಾಂ ಚಿನ್ನ
4. 309.4 ಗ್ರಾಂ ಬೆಳ್ಳಿ
5. ₹ 2,69,900/– ನಗದು
6. ₹ 17,36,725/– ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು
7. ₹ 2,50,000/– ಷೇರು ಹೂಡಿಕೆ.

2. ಶ್ರೀ ಎಂ.ವಿ. ವೀರಭದ್ರಯ್ಯ, ಐ.ಎ.ಎಸ್(ಸ್ವಯಂ ನಿವೃತ್ತಿ).

1. ದಿನಾಂಕ 23–11–1994 ರಂದು ಆರೋಪಿತರ ಹೆಂಡತಿ ಶ್ರೀಮತಿ.ಗಂಗಮ್ಮ ರವರ ಹೆಸರಿನಲ್ಲಿರುವ ಸೈಟ್ ನಂ. 225, ಹಳೆ ನಂ. 339, ಹೊಸಹಳ್ಳಿ, ಎಂ.ಸಿ. ಲೇಔಟ್, ಮಾಗಡಿ ಮುಖ್ಯರಸ್ತೆ, ಬೆಂಗಳೂರು. 50*70 ಅಳತೆಯಲ್ಲಿರುವ ಮನೆ.

2. ಮನೆ ನಂ. 135, ಬಿನ್ನಿಮಿಲ್ ಬಡಾವಣೆ, ವಿಜಯನಗರ, ಬೆಂಗಳೂರು 55*37 ಶ್ರೀಮತಿ. ಪುಷ್ಪ ರವರ ಹೆಸರಿನಲ್ಲಿರುತ್ತೆ.

3. ವಾಣಿಜ್ಯ ಕಟ್ಟಡ ನಂ. 1418, ಪ್ರಸನ್ನ ಚಿತ್ರಮಂದಿರದ ಹತ್ತಿರ, ವಿದ್ಯಾರಣ್ಯನಗರ, ಮಾಗಡಿ ಮುಖ್ಯರಸ್ತೆ, ಬೆಂಗಳೂರು. ಎರಡು ಮಹಡಿ ಶ್ರೀ ವೀರಭದ್ರಯ್ಯ ರವರ ಹೆಸರಿನಲ್ಲಿರುತ್ತೆ.

4. 890.970 ಗ್ರಾಮ್ ಚಿನ್ನ

5. 10.605 ಕೆ.ಜಿ. ಬೆಳ್ಳಿ ದೊರೆತಿರುತ್ತದೆ.

6. ₹ 94,000/–ಗಳ ನಗದು ಹಣ ದೊರೆತಿರುತ್ತದೆ.

7. ಗೃಹೋಪಯೋಗಿ ವಸ್ತುಗಳು ₹ 14,68,150/–

3. ಶ್ರೀ ಸಿದ್ದಯ್ಯ, ಐ.ಎ.ಎಸ್(ಪ್ರಸ್ತುತ ನಿವೃತ್ತ).

1. ₹ 62,15,800/– ಬೆಲೆಬಾಳುವ ಎರಡು ಪಾಸದ ಮನೆಗಳು
2. ₹ 54,17,500/– ಬೆಲೆಬಾಳುವ ಕೃಷಿ ಜಮೀನು
3. ₹ 5,35,250/– ಗಳ ಬ್ಯಾಂಕ್‌ಗಳಲ್ಲಿ ಹೂಡಿಕೆ
4. ₹ 14,53,927/– ಬೆಲೆಬಾಳುವ ವಾಹನಗಳು
5. ₹ 34,15,403/– ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು
6. ₹ 20,43,369/– ಬೆಲೆಬಾಳುವ ಚಿನ್ನಾಭರಣಗಳು
7. ₹ 3,83,707/– ಬೆಲೆಬಾಳುವ ಬೆಳ್ಳಿ
8. ₹ 31,200/– ನಗದು